ವೀರ ಮರಣವಪ್ಪಿದ ಸುದ್ದಿ ತಲುಪಿತ್ತು. ಇಡೀ ನಗರ ಶೋಕಾಚರಣೆಯಲ್ಲಿ ಮುಳುಗಿತು. ವಸಂತ ಲಾಡ್ ಅವರ ಕಟೌಟ್ ಮಾಡಿ ಊರಿನಲ್ಲಿ ಮೆರವಣಿಗೆ ಮಾಡಲಾಯಿತು. ಹದಿಮೂರನೆಯ ದಿನದ ತಿಥಿ ಕಾರ್ಯ ಮಾಡಿ ಮುಗಿಸಬೇಕೆನ್ನುವಷ್ಟರಲ್ಲಿ ಸೇನೆಯಿಂದ ಬಂದ ಇನ್ನೊಂದು ಟೆಲಿಗ್ರಾಂ, ವಸಂತ ಅವರು ಬದುಕಿದ ಸುದ್ದಿ ಮುಟ್ಟಿಸಿತು. ತಿಥಿಯ ತಯಾರಿಯಲ್ಲಿದ್ದ ಕುಟುಂಬದೊಂದಿಗೆ ಇಡೀ ನಗರ ಹಬ್ಬ ಆಚರಿಸಿತು. ಮುಂದೆ ವಸಂತರನ್ನು ಧಾರವಾಡ ನಗರ ಅಭೂತಪೂರ್ವವಾಗಿ ಸ್ವಾಗತಿಸಿ ಸನ್ಮಾನಿಸಿತು. ಶಾಲೆ ಕಾಲೇಜುಗಳು ಅವರನ್ನು ಅತಿಥಿಯಾಗಿ ಆಹ್ವಾನಿಸಿ ಯುದ್ಧದ ರೋಚಕ ಸಾಹಸಗಾಥೆಯನ್ನು ಕೇಳತೊಡಗಿದವು. ಬಾಂಗ್ಲಾ ವಿಮೋಚನೆಯ ಸಂದರ್ಭದ ಕದನದಲ್ಲಿ ಗಾಯಗೊಂಡ ಅನೇಕ ಯೋಧರನ್ನು ಕರೆಸಿ ಮೆರವಣಿಗೆ ಮಾಡಿಸಿ ಸನ್ಮಾನ ಮಾಡಿದ ಸುಯೋಗ ಈ ಉ.ಸೈ.ಕ. ಸಮಿತಿಗಿದೆ.' ಹೀಗೆ, ಕದನದ ಹಲವು ಕತೆಗಳನ್ನು ಕೃಷ್ಣ ಅವರು ನೋವಿನಿಂದ, ಅಷ್ಟೇ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

1999ರ ಅವಧಿಯಲ್ಲಿ ಕಾರ್ಗಿಲ್ ಕದನ ನಡೆಯಿತಲ್ಲ; ಆ ಯುದ್ಧದಲ್ಲಿ ದೇಶದ 533 ಯೋಧರು ಪ್ರಾಣ ಕಳೆದುಕೊಂಡರು. ಅವರಲ್ಲಿ ಕರ್ನಾಟಕದ 13 ಯೋಧರೂ ಇದ್ದಾರೆ. ಶಿವಬಸಯ್ಯ ಕುಲಕರ್ಣಿ, ಭರತ ಬಬನ ಮಸ್ಕೆ, ದಾವಲಸಾಬ – ಹೀಗೆ ಒಬ್ಬೊಬ್ಬರ ಮೃತದೇಹಗಳು ಬಂದು ಇಡೀ ನಾಡನ್ನು ಕಂಬನಿಯಲ್ಲಿ ಮುಳುಗಿಸಿದ್ದವು. ಆಗ ಈ ಸಮಿತಿಯವರು ಅವರ ಕುಟುಂಬಗಳಿಗೆ ಹೆಗಲಾಗಿ ಮಾನಸಿಕವಾಗಿ ಆರ್ಥಿಕವಾಗಿ ಸಹಾಯವನ್ನು ನೀಡಿ ಸಂತೈಸುವ ಕೆಲಸ ಮಾಡಿದ್ದವು. ಕದನಭೂಮಿ ಮಾತ್ರವಲ್ಲ, ಶಾಂತಿ ಸಮಯದಲ್ಲಿ ಹುತಾತ್ಮರಾಗುವ ಪ್ರತಿ ಯೋಧರ ಕುಟುಂಬದ ವಿಳಾಸ ಪಡೆದು ಅವರ ಮನೆ ಬಾಗಿಲಿಗೇ ಸಹಾಯ ಧನವನ್ನು ತಲುಪಿಸುವ ಕೈಂಕರ್ಯವನ್ನು ಸಮಿತಿ ಮಾಡುತ್ತಿದೆ.




'ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ 'ಕಾರ್ಗಿಲ್ ವಾರ್ ಸ್ಮಾರಕ' ದೇಶದ ನಾಗರಿಕರು ತಮ್ಮ ಸ್ವಂತ ಖರ್ಚಿನಲ್ಲಿ ಕಟ್ಟಿಸಿದ ದೇಶದ ಮೊಟ್ಟ ಮೊದಲನೇ ಸ್ಮಾರಕ' ಎಂದು ಕೃಷ್ಣ ಜೋಶಿ ನೆಪಿಸಿಕೊಳ್ಳುತ್ತಾರೆ. ದೇಶದ ಸೈನಿಕರ ನೆನಪಿನಲ್ಲಿ ಸ್ಮಾರಕ ನಿರ್ಮಿಸುವ ಯೋಚನೆಯನ್ನು ಅಂದಿನ ಜಿಲ್ಲಾಧಿಕಾರಿ ವಂದನಾ ಗುರ್ನಾನಿಯವರಲ್ಲಿ ಹೇಳಿಕೊಂಡಾಗ ಅವರು ಮೀನಮೇಷ ಎಣಿಸದೆ, ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲೇ ಸ್ಥಳ ನೀಡಿ, ಜಿಲ್ಲಾ ಪರಿಷತ್ತಿನಿಂದ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದ್ದರು. 'ಸ್ಮಾರಕವನ್ನು ಕಟ್ಟಲು ಸಂಪನ್ಮೂಲ ಹೇಗೆ ಹೊಂದಿಸುತ್ತೀರಿ' ಎನ್ನುವ ಪ್ರಶ್ನೆಗೆ, 'ಭಿಕ್ಷೆ ಎತ್ತುತ್ತೇವೆ, ಅಗತ್ಯಬಿದ್ದರೆ ಬೂಟ್ ಪಾಲಿಷ್ ಮಾಡುತ್ತೇವೆ' ಎನ್ನುವ ಪ್ರತಿಕ್ರಿಯೆ ಬಂದಾಗ ಜಿಲ್ಲಾಧಿಕಾರಿಗಳು ಕಣ್ಣು ತುಂಬಿಕೊಂಡಿದ್ದನ್ನು ನೆನಪಿಸಿಕೊಳ್ಳುವಾಗ ಕೃಷ್ಣ ಅವರು ಈಗಲೂ ಗದ್ಗಿತರಾಗುತ್ತಾರೆ.

'ದೇಶದ ಪ್ರಜೆ ದಯಾಳು. ಆತ ಬಡವನಾಗಿರಬಹುದು. ಆದರೆ ವಿಶಾಲ ಹೃದಯಿ. ಯಾರೋ ಒಬ್ಬರು ಸಿಮೆಂಟು ಕೊಟ್ಟರು, ಇನ್ನಾರೋ ದಾನಿಗಳು ಕಬ್ಬಿಣ ನೀಡಿದರು, ದೇಣಿಗೆಯ ಪ್ರವಾಹವೇ ಹರಿದು ಬಂದಿತು. 1995ರ ಆಗಸ್ಟ್ 15ರಂದು ಸೈನಿಕರ ಕುಟುಂಬದವರ ಸಮಕ್ಷಮದಲ್ಲಿ ಈ ಸ್ಮಾರಕ ಲೋಕಾರ್ಪಣೆಯಾಯಿತು' ಎಂದು ಕೃಷ್ಣ ನೆನಪಿಸಿಕೊಳ್ಳುತ್ತಾರೆ.

ಜುಲೈ 26 'ಕಾರ್ಗಿಲ್ ವಿಜಯ ದಿವಸ'. ಯುದ್ಧದಲ್ಲಿ ಹುತಾತ್ಮರನ್ನು ನೆನಪಿಸಿಕೊಳ್ಳುವ ದಿನ. ಈ ಸಂದರ್ಭದಲ್ಲಿ ಧಾರವಾಡದ ಕಾರ್ಗಿಲ್ ಸ್ಮಾರಕದ ನೆನಪು, ಯೋಧರ ಬಗ್ಗೆ ಸಾರ್ವಜನಿಕರಲ್ಲಿ ಅಪೂರ್ವ ನೆನಪುಗಳನ್ನು ಮಿಡಿಯಬಲ್ಲದು.

